ಒಂದಷ್ಟು ಹೊತ್ತು ಸಿಡಿಯುತ್ತಾನೆ. ಆದರೆ, ಸಕಾಲಕ್ಕೆ ಮಳೆ ಸುರಿಸಲಾರದ ನಿಶ್ಯಕ್ತ. ಅವನಿಂದೇನಾಗಲು ಸಾಧ್ಯ!? ತನ್ನ ಬಿಸುಬೆಡಗು- ಬಿನ್ನಾಣ ಕಂಡ ಯಾವ ರಸಿಕ ತಾನೇ ಸುಮ್ಮನಿರಲು ಸಾಧ್ಯ? ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವಳು. ಆ ಹೊತ್ತು ಬಂದು ಹೋದ ಆ ರಸಿಕ ಈಗ ಎಲ್ಲಿದ್ದಾನೋ ಗೊತ್ತಿಲ್ಲ ? ಈ ಹೊಲವನ್ನೆಲ್ಲ ಉತ್ತು ಹೋದ, ಆದರೂ ಅವನೂ ಸರಿಯಾದ ಜಾತಿ ಬೀಜದ ಬೆಳೆ ಬಿತ್ತಲಿಲ್ಲ. ಯಾವ ಕರ್ಮದ ಫಲವೋ ನನಗೂ ತಿಳಿಯದು.

ಹೆಜ್ಜೆ ಮೇಲೆ ಹೆಜ್ಜೆ ಇಟ್ಟಂತೆ ಬದುವಿನ ಮೇಲೆ ಬರುವವಳ ಎದುರಿಗೆ ನಿಂತ ಅಜ್ಜಿ. ಅವಳು ಸಾಮಾನ್ಯವಾದ ಅಜ್ಜಿಯಲ್ಲ. ಆಲದ ಮರದಂತೆ, ತನ್ನೆಲ್ಲ ಹೊಲವನ್ನು ಆವರಿಸಿಕೊಂಡವಳು. ಇಂಥವಳ ವಂಶದವರ ಹೊಟ್ಟೆಯಲ್ಲಿ ಹುಟ್ಟಿದ ನನ್ನ ಗಂಡ. ಎಷ್ಟು ಹೊಲ ಉತ್ತು ಸಾಕಾದರೂ ಒಂದ್ಹಿಡಿ ಗಟ್ಟಿ ಕಾಳು ಬೆಳೆಯಲಿಲ್ಲ. ಈಗ ಅಥವಾ ನಾಳೆ ಒಳ್ಳೆಯ ಫಸಲು ಹುಟ್ಟಬಹುದು ಎಂಬ ನಿರೀಕ್ಷೆ, ಬರೀ ಶ್ರಮ, ಬೆವರು ಹರಿಸಿದ ನೆನಪು.

* * *

ವನಜಾಕ್ಷಿಯ ಗಂಡ ರಾಜಶೇಖರ ಹೊಲದ ಬದುವಿನ ಮೇಲೆ ವಿರಾಮವಾಗಿ ಕುಳಿತಿದ್ದನು. ಅವನು ಬೆಳೆಯ ನಷ್ಟ ಮತ್ತು ಲಾಭವನ್ನು ಲೆಕ್ಕ ಹಾಕುತ್ತಿದ್ದ. ತನ್ನವ್ವನೊಂದಿಗೆ ಹೆಂಡತಿ ವನಜಾಕ್ಷಿ ಹೊಲವನ್ನೆಲ್ಲ ಸುತ್ತಾಡಿ ಬಂದುದನ್ನು ಕಂಡನು. ತಾನು ಇಲ್ಲಿವರೆಗೆ ಹಾಕುತ್ತಿದ್ದ ಲಾಭ- ನಷ್ಟದ ಲೆಕ್ಕವೆಲ್ಲ ತಿರುವು ಮುರುವಾಗಿ, ಖಾಲಿಖಾಲಿ ಕೈಯಲ್ಲಿ ನಿಂತಂತಾದನು. ಆದರೆ, ಅವನ ಮತ್ತು ಅವಳ ಎದೆಯೊಳಗೆ ಅದೆಷ್ಟೋ ಲಾಭ ಮತ್ತು ನಷ್ಟದ ಕನಸು, ನೋವು ಧಾರೆಯಾಗಿ ಹರಿದವು.

ಬಿಸಿಲ ಬೇಗೆಯಲ್ಲಿ ಒಣಗಿದ ಹೊಲ, ಒಮ್ಮೆಲೆ ಹಸಿರು ಮೂಡಿ, ಮನೆಯ ಖಾಲಿ ಕಣಜ ದವಸ-ಧಾನ್ಯದಿಂದ ತುಂಬಿಕೊಂಡಂತೆ ಕಂಡಳು. ಇನ್ನು ನನಗೆ ಯಾವ ಬಡತನವೂ ಇಲ್ಲ. ಮಕ್ಕಳಿಲ್ಲ ಎಂಬ ಕೊರಗು ಬಿಟ್ಟರೆ ಇನ್ನೇನೂ ನನ್ನಲ್ಲಿ ಇಲ್ಲ. ಅವನು ಮತ್ತು ಅವಳು ಇಬ್ಬರೂ ವನವಾದರು. ಈ ವನದೊಳಗೆ ತಾವಿಬ್ಬರೂ ಒಂದು ದೇಹ, ಎರಡು ಜೀವ ಎಂಬಂತೆ ವಿಹರಿಸಿದರು.

* * *

ಇವಳಿಗೆ ಯಾವ ದೇವಲೋಕ ಹೊಕ್ಕಿದರೂ ಸಿಗದ ಈ ಸುಖ ಇಲ್ಲಿ ಸಿಕ್ಕಿತು. ಈ ಹೆಣ್ಣಿಗೆ ಈ ಸುಖ ಬಿಟ್ಟರೆ, ಇನ್ನು ಆಸ್ತಿ, ಮನೆ, ಮಠ ಕಟ್ಟಿಕೊಂಡು ಏನಾಗಬೇಕು? ಇಂಥದೇ ಸುಖದ ಲೋಲುಪತೆಯಲ್ಲಿ ಮೈಮರೆತವರಿಗೆ ಕಿವಿ ಗಡಚಿಕ್ಕುವ ತಮಟೆ ಸದ್ದು, ಯಾರದೋ ಆಕ್ರಂದನ, ಅಧಿಕಾರಿಗಳ ದಂಡು, ಅವರ ಸುತ್ತ ನಿಂತ ಪೊಲೀಸ್ ಪಹರೆ.

ಇದೇನೆಂದು ಎಚ್ಚರಗೊಳ್ಳುವ ಹೊತ್ತಿಗೆ ಎಷ್ಟೋ ಸಮಯ ಕಳೆದಿತ್ತು. ರಾಜಶೇಖರ ನಿಂತ ನೆಲದಿಂದ ನಾಕೇ ಹೆಜ್ಜೆಗೆ ದಾಪುಗಾಲಿನಲ್ಲಿ ಓಡಿದನು. ಆತ್ಮಹತ್ಯೆ ಮಾಡಿಕೊಂಡ ಚಾಮೇಗೌಡನ ಪಾರ್ಥಿವ ಶರೀರದ ಮೆರವಣಿಗೆ ನಡೆದಿತ್ತು. ಚಾಮೇಗೌಡನ ಹೆಂಡತಿ ಮತ್ತು ಮಕ್ಕಳ ರೋದನ. ಅಧಿಕಾರಿಗಳಿಂದ ಹತ್ತಾರು ಪ್ರಶ್ನೆ. ಈ ಸಾವು ಯಾವ ಕಾರಣಕ್ಕಾಗಿ ಸಂಭವಿಸಿತು? ಕಾರಣ ಯಾವುದು? ರೊಚ್ಚಿಗೆದ್ದ ರೈತರು ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು. ಅತನ ಸಾವಿನ ಕಾರಣ ಅವನಿಗೆ ಗೊತ್ತು. ಅವನೀಗ ಸತ್ತು ಹೋಗಿದ್ದಾನೆ. ಅವನೇನಾದರೂ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪತ್ರಗಿತ್ರ ಬರೆದಿಟ್ಟಿದ್ದನೇ ಎಂಬ ಪ್ರಶ್ನೆ. ಅಲ್ಲೇ ಶವದ ಬಳಿ ಸಿಕ್ಕ ಹತ್ತಾರು ಸಾಲದ ಪತ್ರ. ಅಧಿಕಾರಿಯೋರ್ವ ಅದರಲ್ಲಿನ ಒಕ್ಕಣೆ ಓದಿ ದಂಗಾದನು. ಅವನು ಆ ಪತ್ರದಲ್ಲಿದ್ದಂತೆ ಮಹಜರು ನಡೆಸಿದನು.

* * *

ಚಾಮೇಗೌಡನ ಪಾರ್ಥಿವ ಶರೀರ ಮೆರವಣಿಗೆ ಸಾಗಿತು. ಅಧಿಕಾರಿಗಳು ಈ ಶವವನ್ನು ಶವಾಗಾರಕ್ಕೆ ಸಾಗಿಸಿ ಬಿಟ್ಟರಷ್ಟು ಸಾಕು. ಅಲ್ಲಿ ಯಾವ ಕಾರಣಕ್ಕಾಗಿ ಸತ್ತ ಎಂಬುದನ್ನು ಡಾಕ್ಟರ್ ಕೊಡುವ ವರದಿ ಹೇಳುತ್ತದೆ. ಅಲ್ಲಿಗೆ ನಾವು ತಲೆ ತೊಳೆದುಕೊಂಡಂತೆ ಎಂದು ತಹಶೀಲ್ದಾರ್ ಅವರು ಪೊಲೀಸರಿಗೆ ಸೂಚನೆ ನೀಡಿದರು.

ರೈತರ ಮೆರವಣಿಗೆ ಹೆದ್ದಾರಿಯಲ್ಲಿ ಸಾಗಿತ್ತು. ವಿವಿಧ ಪಕ್ಷದ ಮುಖಂಡರು ಕೂಡ ಈ ಪ್ರತಿಭಟನೆಗೆ ಬೆಂಬಲವಾಗಿ ನಿಂತರು. ಹೆದ್ದಾರಿ ಸರ್ಕಲ್‌ನಲ್ಲಿ ಶವ ಇಟ್ಟು ಎಲ್ಲರೂ ಒಂದೊಂದು ಬಗೆಯಲ್ಲಿ ಭಾಷಣ ಬಿಗಿದರು. ರೈತನ ಈ ಸ್ಥಿತಿಯ ಸಾವಿಗೆ ಸರ್ಕಾರವೇ